

بِسۡمِ اللّٰہِ الرَّحۡمٰنِ الرَّحِیۡمِ

# ಯೌಮೆ ಮಸೀಹ್ ಮೌಊದ್

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತುಹ್'** ಮಸೀದಿಯಲ್ಲಿ 22-03-2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್, ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಮಾರ್ಚ್ ದಿನಾಂಕ 23. ಈ ದಿನವನ್ನು ಅಹ್ಮದಿಯಾ ಜಮಾಅತ್‌ನಲ್ಲಿ ಯೌಮೆ ಮಸೀಹ್ ಮೌಊದ್ ಎಂದು ನೆನಪಿಸಲಾಗುತ್ತಿದೆ. ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಅಲೈಹಿಸ್ಸಲಾಮ್ ತಾನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಮಾಚಾರ ನೀಡಿದ ಮಸೀಹ್ ಮೌಊದ್ ಮತ್ತು ಮಹ್‌ದೀ ಮಅ್‌ಹೂದ್ ಆಗಿರುವೆನೆಂದು ವಾದಿಸಿದರು. ಹಾಗೆ ಅವರು ಈ ದಿನಾಂಕದಂದು ಬೈಅತ್ ಪಡೆಯುವುದನ್ನು ಆರಂಭಿಸಿದರು. ಮಸೀಹ್ ಮೌಊದ್ ಆಗಮಿಸುವ ಉದ್ದೇಶ, ಆ ಕಾಲಘಟ್ಟದ ಸ್ಥಿತಿ ಮತ್ತು ತನ್ನ ವಾದಕ್ಕೆ ಸಂಬಂಧಿಸಿ ಪುರಾವೆಗಳು, ಇವುಗಳನ್ನು ವಿವರಿಸುತ್ತಾ ಅವರು ಹೇಳಿದ ಮಾತುಗಳನ್ನು ಈಗ ನಾನು ನಿಮ್ಮ ಮುಂದಿಡುವೆನು.

ಆ ಕಾಲಘಟ್ಟದ ಸ್ಥಿತಿ ಹೇಗಿತ್ತೆಂದರೆ ಇಸ್ಲಾಮ್ ಧರ್ಮದ ಅಲುಗಾಡುತ್ತಿದ್ದ ನೌಕೆಯನ್ನು ನಿಯಂತ್ರಣಕ್ಕೊಳಪಡಿಸುವ ಒಬ್ಬನ ಆಗಮನವನ್ನು ಅದು ಆವಶ್ಯಪಡುತ್ತಿತ್ತು. ಮುಸ್ಲಿಮ್ ಮತಪಂಡಿತರು ಮೊದಲು ಒಬ್ಬ ಮಸೀಹ್ ಆಗಮಿಸಲಿ ಎಂದು ಪ್ರತೀಕ್ಷಿಸುತ್ತಿದ್ದರೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಾದಿಸಿದಾಗ ಮತಪಂಡಿತರಲ್ಲಿ ಬಹುತೇಕ ಜನರು ಅವರನ್ನು ವಿರೋಧಿಸಿದರು. ಮುಸ್ಲಿಮ್ ಜನಸಾಮಾನ್ಯರಿಗೆ ಸುಳ್ಳು ಕಥೆಗಳನ್ನು ಹೇಳಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತು ಅವರ ಜಮಾಅತ್ ವಿರುದ್ಧ ಜನರನ್ನು ಎಷ್ಟು ಉದ್ರೇಕಿಸಿದರೆಂದರೆ ಹತ್ಯೆ ಮಾಡಬೇಕೆಂಬ ಫತ್ವಗಳು ಸಹ ನೀಡಲ್ಪಟ್ಟಿತು. ಇಂದಿನ ತನಕ ಕೆಲವು ಸ್ಥಳಗಳಲ್ಲಿ ಅಹ್ಮದಿಯರ ವಿರುದ್ಧ ಇಸ್ಲಾಮಿನ ಹೆಸರಿನಲ್ಲಿ ದೌರ್ಜನ್ಯ, ಬರ್ಬರ ಕೃತ್ಯ, ಹತ್ಯೆ, ಮೊದಲಾದವುಗಳ ಭಯಾನಕ ಉದಾಹರಣೆಗಳು ಸ್ಥಾಪಿಸಲ್ಪಡುತ್ತಾ ಇವೆ. ಆದರೆ ಇಸ್ಲಾಮ್ ಧರ್ಮದ ವಾಸ್ತವಿಕತೆಯನ್ನು ಅರಿತವರು ಹೀಗೆ ಎಂದೂ ಯೋಚಿಸಲಾರರು. ಮತ್ತು ಅವರು ಅಂತಹ ಕೃತ್ಯಗಳನ್ನು ಎಂದೂ ಮಾಡಲಾರರು. ಮಸೀಹ್ ಮೌಊದ್ ಆಗಮಿಸುವ ಆವಶ್ಯಕತೆ ಏನು, ಮಸೀಹರಿಗೆ ಈ ಕಾಲಘಟ್ಟದೊಂದಿಗೆ ಯಾವ ವೈಶಿಷ್ಟ್ಯವಿದೆ ಎಂಬುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಪವಿತ್ರ ಖುರ್‌ಆನ್ ಇಸ್ರಾಈಲಿ ಮತ್ತು ಇಸ್ಮಾಈಲಿ ಖಿಲಾಫತ್‌ಗಳ ಮಧ್ಯೆ ಇರುವ ಹೋಲಿಕೆ ಬಗ್ಗೆ ಸ್ಪಷ್ಟವಾಗಿ ಈ ವಚನದಲ್ಲಿ ಪ್ರಕಟಿಸಿದೆ:

وَعَدَ اللّٰہُ الَّذِیۡنَ اٰمَنُوۡا مِنۡکُمۡ وَعَمِلُوا الصّٰلِحٰتِ لَیَسۡتَخۡلِفَنَّہُمۡ فِی الۡاَرۡضِ کَمَا اسۡتَخۡلَفَ الَّذِیۡنَ مِنۡ قَبۡلِہِمۡ

**ವಅದಲ್ಲಾಹುಲ್ಲದೀನ ಆಮನೂ ಮಿನ್‌ಕುಮ್ ವ ಅಮಿಲುಸ್ಸಾಲಿಹಾತಿ ಲಯಸ್ತಖ್‌ಲಿಫನ್ನಹುಮ್ ಫಿಲ್‌ಅರ್‌ಝಿ ಕಮಸ್ತಖ್‌ಲಫಲ್ಲದೀನ ಮಿನ್ ಖಬ್‌ಲಿಹಿಮ್.**

ನಿಮ್ಮ ಪೈಕಿ ವಿಶ್ವಾಸ ಹೊಂದಿ ಸತ್ಕರ್ಮಗೈಯುವವರಿಗೆ, ಅವರಿಗಿಂತ ಮುಂಚೆ ಇದ್ದವರನ್ನು ಖಲೀಫರನ್ನಾಗಿ ಮಾಡಿದಂತೆಯೇ ಖಂಡಿತವಾಗಿಯೂ ಅವರನ್ನು ಸಹ ಭೂಮಿಯಲ್ಲಿ ಖಲೀಫರನ್ನಾಗಿ ಮಾಡುವೆನು. (24:56).

ಇಸ್ರಾಈಲಿ ಪರಂಪರೆಯ ಕೊನೆಯ ಖಲೀಫರಾಗಿ ಹಝ್ರತ್ ಮೂಸಾ ಅಲೈಹಿಸ್ಸಲಾಮರ ನಂತರ ಹದಿನಾಲ್ಕನೆಯ ಶತಮಾನದಲ್ಲಿ ಆಗಮಿಸಿದವರು ಹಝ್ರತ್ ಈಸಾ ಮಸೀಹ್ ಆಗಿದ್ದಾರೆ. ಆದುದರಿಂದ ಮುಸ್ಲಿಮ್ ಸಮುದಾಯದಲ್ಲಿಯೂ ಮಸೀಹರಾಗಿ ಆಗಮಿಸುವವರು ಹದಿನಾಲ್ಕನೆಯ ಶತಮಾನದ ಆರಂಭದಲ್ಲಿ ಆಗಮಿಸುವುದು ಹೋಲಿಕೆಯನ್ನು ಸಮಗಟ್ಟಲು ಆವಶ್ಯಕವಾಗಿತ್ತು. ಇದಲ್ಲದೆ ಅಹ್ಲೆ ಕಶ್‌ಫ್ (ಸ್ವಪ್ನದರ್ಶನ ಗಳಿಸುವವರು) ಹದಿನಾಲ್ಕನೆಯ ಶತಮಾನವನ್ನು ಮಸೀಹರ ಆಗಮನದ ಕಾಲವೆಂದು ಹೇಳಿದ್ದರು. ಉದಾಹರಣೆಗೆ ಹಝ್ರತ್ ಶಾ ವಲಿಯುಲ್ಲಾಹ್ ಸಾಹಿಬ್ ಮೊದಲಾದ ಅಹ್ಲೆ ಹದೀಸ್‌ಗೆ ಸೇರಿದ ಜನರು ಒಮ್ಮತದಿಂದ ಹೇಳಿರುವರು, ಅಲಾಮಾತೆ ಸುಗ್ರಾ (ಕಿರಿಯ ಚಿಹ್ನೆಗಳು) ಪೂರ್ಣವಾಗಿಯೂ, ಅಲಾಮಾತೆ ಕುಬ್ರಾಗಳಲ್ಲಿ (ಹಿರಿಯ ಚಿಹ್ನೆಗಳಲ್ಲಿ) ಬಹಳಷ್ಟು ಈಗಾಗಲೇ ಕಾಣಿಸಿಕೊಂಡಿವೆ ಎಂದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮಸೀಹ್ ಆಗಮಿಸುವುದನ್ನು ಸೂಚಿಸುವ ಎಲ್ಲಾ ಚಿಹ್ನೆಗಳು ಕಾಣಿಸಿಕೊಂಡಿವೆ. ಅದೇರೀತಿ ಆಗಮಿಸಲಿರುವ ಮಸೀಹ್ ಮೌಊದರ ಒಂದು ಚಿಹ್ನೆ ಹೀಗಿದೆ: ಆ ಕಾಲದಲ್ಲಿ ರಮಝಾನ್ ತಿಂಗಳಲ್ಲಿ ಸೂರ್ಯ ಚಂದ್ರ ಗ್ರಹಣಗಳು ಸಂಭವಿಸುವುವು. ವಾದಿಸಿದ ನಂತರ ಸೂರ್ಯ ಚಂದ್ರ ಗ್ರಹಣಗಳು ಸಂಭವಿಸುವುದು ಎಂತಹ ಚಿಹ್ನೆ ಎಂದರೆ ಅದರಲ್ಲಿ ಸುಳ್ಳು ಸೃಷ್ಟಿಸುವಿಕೆ ಮತ್ತು ನಟನೆ ಇರುವುದೇ ಇಲ್ಲ. ಇದರ ಮೊದಲು ಇಂತಹ ಸೂರ್ಯಚಂದ್ರ ಗ್ರಹಣಗಳು ಸಂಭವಿಸಲಿಲ್ಲ. ಇದು ಎಂತಹ ಚಿಹ್ನೆಯಾಗಿದೆಯೆಂದರೆ ಅದರ ಮೂಲಕ ಲೋಕದ ಎಲ್ಲರಿಗೂ ಆಗಮಿಸುವವನ ಬಗ್ಗೆ ಪ್ರಕಟಣೆಯನ್ನು ಅಲ್ಲಾಹನು ನೀಡಿದನು. ಅರಬ್ ದೇಶದ ಜನರು ಸಹ ಈ ಚಿಹ್ನೆಯನ್ನು ನೋಡಿ ತಮ್ಮ ಮನೋಭಾವದ ಪ್ರಕಾರ ಸರಿಯಾಗಿ ಹೇಳಿದರು. ನಮ್ಮ ವಿಜ್ಞಾಪನೆ ಪತ್ರಗಳು ಎಲ್ಲೆಲ್ಲಿ ತಲಪಲಿಲ್ಲವೋ ಅಂತಹ ಸ್ಥಳಗಳಲ್ಲಿ ಈ ಸೂರ್ಯಚಂದ್ರ ಗ್ರಹಣಗಳು ಆಗಮಿಸಿದವನ ಬಗ್ಗೆ ಪ್ರಕಟಣೆ ನೀಡಿದುವು. ಅದು ಅಲ್ಲಾಹನು ಸ್ವತಃ ಪ್ರಕಟಿಸಿದ ಚಿಹ್ನೆಯಾಗಿತ್ತು. ಅದು ಮನುಷ್ಯನ ಯೋಜನೆಗಳಿಂದ ಸಂಪೂರ್ಣವಾಗಿ ಮುಕ್ತವಾಗಿತ್ತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಸಹ ಹೇಳಿದ್ದರು: ಹಝ್ರತ್ ಆದಮರ ಕಾಲದಿಂದ

ಮೊದಲುಗೊಂಡು ಈ ಶತಮಾನದ ತನಕ ಇಂತಹ ಗ್ರಹಣಗಳು ಎಂದೂ ಸಂಭವಿಸಲಿಲ್ಲ. ಯಾರಾದರೂ ಚರಿತ್ರೆಯಿಂದ ಸಾಬೀತು ಗೊಳಿಸುವುದಾದರೆ ನಾವು ಒಪ್ಪಿಕೊಳ್ಳುವೆವು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ಆ ಕಾಲಘಟ್ಟದಲ್ಲಿ ಧೂಮಕೇತು ಕಾಣಿಸಿಕೊಳ್ಳುವುದು ಎಂಬ ಒಂದು ಚಿಹ್ನೆ ಸಹ ಈಗ ಈಡೇರಿದೆ. ಈಸಾ ಮಸೀಹರ ಕಾಲದಲ್ಲಿ ಅದು ಕಾಣಿಸಿಕೊಂಡಿತ್ತು. ಈಗ ಸಹ ಅದು ಕಾಣಿಸಿಕೊಂಡಿದೆ. ಇದೇ ರೀತಿ ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಲಾಗಿದೆ:

وَإِذَا ٱلۡعِشَارُ عُطِّلَتۡ وَإِذَا ٱلۡوُحُوشُ حُشِرَتۡ وَإِذَا ٱلۡبِحَارُ سُجِّرَتۡ وَإِذَا ٱلنُّفُوسُ زُوِّجَتۡ وَإِذَا ٱلۡمَوۡءُۥدَةُ سُئِلَتۡ بِأَيِّ ذَنۢبٖ قُتِلَتۡ وَإِذَا ٱلصُّحُفُ نُشِرَتۡ

**ವ ಇಧ಼ಲ್ ಇಶಾರು ಉತ್ತಿಲತ್. ವ ಇಧ಼ಲ್ ಉಹೂಶು ಹುಶಿರತ್. ವ ಇಧ಼ಲ್ ಬಿಹಾರು ಸುಜ್ಜಿರತ್. ವ ಇಧ಼ನ್ನುಫೂಸು ಝುುವ್ವಿಜತ್. ವ ಇಧ಼ಲ್ ಮವ್‌ಊದತು ಸುಯಿಲತ್. ಬಿ ಅಯ್ಯಿ ಧ಼ನ್‌ಬಿನ್ ಖುತಿಲತ್. ವ ಇಧ಼ಸ್ಸುಹುಫು ನುಶಿರತ್.**

ಹತ್ತು ಮಾಸದ ಗರ್ಭವತಿ ಒಂಟೆಗಳು ತ್ಯಜಿಸಲ್ಪಡುವಾಗ, ಮೃಗಗಳು ಮೃಗಾಲಯಗಳಲ್ಲಿ ಜಮಾಯಿಸಲ್ಪಡುವಾಗ, ನದಿಗಳ ನೀರು ಕಾಲುವೆಗಳಲ್ಲಿ ಹರಿಸಲ್ಪಡುವಾಗ, ವಿವಿಧ ಜನಾಂಗಗಳು ಒಗ್ಗೂಡಿಸಲ್ಪಡುವಾಗ, ಹೂಳಲ್ಪಟ್ಟ ಹೆಣ್ಣು ಶಿಶುವಿನ ಬಗ್ಗೆ ಪ್ರಶ್ನಿಸಲ್ಪಡುವಾಗ – ಯಾವ ಅಪರಾಧಕ್ಕೋಸ್ಕರ ಹತ್ಯೆ ಮಾಡಲಾಯಿತು ಎಂದು. ಗ್ರಂಥಗಳು ಪ್ರಕಟಿಸಲ್ಪಡುವಾಗ. (81: 5–11).

ಇವೆಲ್ಲ ಪವಿತ್ರ ಖುರ್‌ಆನಿನ ಭವಿಷ್ಯವಾಣಿಗಳಾಗಿವೆ. ಮೃಗಾಲಯಗಳು ತೆರೆಯಲ್ಪಟ್ಟು ಮೃಗಗಳು ಒಟ್ಟುಗೂಡಿಸಲ್ಪಡುವುವು. ವಿದ್ಯಾಭ್ಯಾಸ ಸಾರ್ವತ್ರಿಕವಾಗಿ ಹರಡುವುದು. ಕೆಲವು ದೇಶಗಳ ಸ್ಥಳೀಯ ನಿವಾಸಿಗಳನ್ನು ಕೆಲವು ಜನಾಂಗದವರು ಹತ್ಯೆ ಮಾಡಿ ನಾಶ ಮಾಡುವರು. ಪವಿತ್ರ ಖುರ್‌ಆನ್‌ನಲ್ಲಿ ಸಮುದ್ರಗಳನ್ನು ಸೇರಿಸುವ ಬಗ್ಗೆ ಸಹ ಭವಿಷ್ಯವಾಣಿ ಇದೆ. ಜನರು ಪರಸ್ಪರ ಜೊತೆ ಸೇರುವ ಬಗ್ಗೆ ಸಹ ಪವಿತ್ರ ಖುರ್‌ಆನ್‌ನಲ್ಲಿ ಹೇಳಲಾಗಿದೆ. ಮಹಿಳೆಯರ ಮೇಲೆ ನಡೆಸಲಾಗುವ ದೌರ್ಜನ್ಯಗಳ ಬಗ್ಗೆ ಪ್ರಶ್ನಿಸಲಾಗುವುದು – ಅವರನ್ನು ಯಾವ ಅಪರಾಧಕ್ಕೋಸ್ಕರ ಕೊಲ್ಲುತ್ತಾರೆಂದು. ಪ್ರೆಸ್, ಮೀಡಿಯಾ ಮೊದಲಾದುವುಗಳು ಇದು ಮಸೀಹ್ ಮೌಊದ್ ಕಾಲಘಟ್ಟವೆಂದು ಸಾಬೀತು ಗೊಳಿಸುತ್ತವೆ. ಪವಿತ್ರ ಖುರ್‌ಆನ್‌ನಲ್ಲಿ ಈ ಎಲ್ಲ ಭವಿಷ್ಯವಾಣಿಗಳಿವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಚಿಹ್ನೆಗಳ ಬಗ್ಗೆ ಪುನಃ ಹೇಳುತ್ತಾರೆ: ವಿವಿಧ ರೀತಿಗಳ ವಿಪತ್ತುಗಳು ಸಂಭವಿಸುವುವು. ಕ್ಷಾಮ, ಪ್ಲೇಗ್, ಕೊಲೇರಾ ಮೊದಲಾದ ದೈವಿಕ ವಿಪತ್ತುಗಳು ಸಂಭವಿಸುವುವು. ಪ್ಲೇಗ್ ಎಂತಹ ಅಪಾಯಕರ ಶಿಕ್ಷೆಯಾಗಿದೆಯೆಂದರೆ ಅದು ಸರಕಾರವನ್ನು ಸಹ ಭೂಕಂಪ ಅನುಭವಿಸುವಂತೆ ಮಾಡಿತು. ಬಹಳ ಭಯಾನಕ ವಿನಾಶ ವ್ಯಾಪಿಸಿತು.

ಅಲ್ಲಾಹನಿಂದ ನಿಯೋಜಿತನಾದವನು ತನ್ನ ಸತ್ಯಕ್ಕೆ ಸಾಕ್ಷ್ಯವಾಗಿ ದೈವಿಕ ದೃಷ್ಟಾಂತಗಳನ್ನು ಸಹ ತೋರಿಸುವುದು ಆವಶ್ಯಕವಾಗಿತ್ತು. ಲೇಖ್‌ರಾಮನಿಗೆ ಸಂಬಂಧಿಸಿದ ದೃಷ್ಟಾಂತ ಕಡಿಮೆ ಮಹತ್ವದ್ದೇನೂ ಆಗಿರಲಿಲ್ಲ. ಒಂದು ಕುಸ್ತಿ ಸ್ಪರ್ಧೆಯ ಹಾಗೆ ಅನೇಕ ವರ್ಷಗಳ ತನಕ ಒಂದು ಶರತ್ತು ನಿಗದಿಪಡಿಸಲಾಗಿತ್ತು. ಹೇಗೆ ಹೇಳಲಾಗಿತ್ತೋ ಹಾಗೆಯೇ ಸಂಭವಿಸಿತು. ಏನು ಇಂತಹ ಬೇರೆ ಉದಾಹರಣೆ ನೀಡಲು ಸಾಧ್ಯವೇ? ಸರ್ವಧರ್ಮ ಸಮ್ಮೇಳನದ ಬಗ್ಗೆ ಸಹ ಅನೇಕ ದಿನಗಳ ಮೊದಲು ನಾವು ಪ್ರಕಟಿಸಿದ್ದೆವು. ಅಲ್ಲಾಹನು ನನಗೆ ತಿಳಿಸಿದ್ದಾನೆ ನಮ್ಮ ಪ್ರಬಂಧ ಇತರ ಎಲ್ಲ ಪ್ರಬಂಧಗಳ ಮೇಲೆ ಜಯಶಾಲಿಯಾಗುವುದು ಎಂದು. ಇಂತಹ ವೈಭವಶಾಲಿ ಗಂಭೀರ ಜಲ್ಸವನ್ನು ನೋಡಿದವರು ಸ್ವತಃ ಚಿಂತಿಸಬಹುದಾಗಿದೆ. ಇಂತಹ ಜಲ್ಸದಲ್ಲಿ ಜಯಗಳಿಸುವ ಸಮಾಚಾರ ಮುಂಚಿತವಾಗಿ ಊಹೆಯಿಂದ ಮಾತ್ರ ಹೇಳಲು ಸಾಧ್ಯವೇ. ಅನಂತರ ನಾವು ಹೇಳಿದಂತೆ ಸಂಭವಿಸಿತು. ಅನ್ಯರು ಸಹ ಅದು ಇತರ ಪ್ರಬಂಧಗಳಿಗಿಂತ ಶ್ರೇಷ್ಟವಾಗಿದೆ ಎಂದು ಹೇಳಿದರು.

ತಾನು ಅಲ್ಲಾಹನಿಂದ ನಿಯೋಜಿತನಾದವನು ಎಂದು ಸಾಕ್ಷ್ಯಾಧಾರಗಳನ್ನು ನೀಡುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಒಟ್ಟಾರೆ ಹೇಳುವುದಾದರೆ ನಾನು ದೇವನಿಯೋಜಿತನು ಎಂದು ಸಾಬೀತುಗೊಳಿಸುವ ಅನೇಕ ಸಾಕ್ಷ್ಯಾಧಾರಗಳಿವೆ. ಒಂದು, ಆಂತರಿಕ ಸಾಕ್ಷ್ಯಾಧಾರಗಳು. ಎರಡನೆಯದು, ಬಾಹ್ಯ ಸಾಕ್ಷ್ಯಾಧಾರಗಳು. ಮೂರನೆಯದು, ಶತಮಾನದ ಆರಂಭದಲ್ಲಿ ಮುಜದ್ದಿದ್ ಆಗಮಿಸುವ ಸಹೀಹ್ ಹದೀಸ್. ನಾಲ್ಕನೆಯದು, إِنَّا نَحْنُ نَزَّلْنَا الذِّكْرَ وَإِنَّا لَهُ لَحَافِظُونَ – **ಇನ್ನಾ ನಹ್‌ನು ನಝ್ಝಲ್‌ನ ಝಿಕ್ರ ವ ಇನ್ನಾ ಲಹೂ ಲಹಾಫಿಝೂನ್** ಎಂಬ ರಕ್ಷಣೆಯ ವಾಗ್ದಾನ. ಐದನೆಯದು, ಬಹಳ ಬಲವತ್ತಾಗಿದೆ. ಅದು ಸೂರತುನ್ನೂರ್‌ನಲ್ಲಿ ಖಿಲಾಫತ್ ಬಗ್ಗೆ ಇರುವ ವಾಗ್ದಾನವಾಗಿದೆ. وَعَدَ اللَّهُ الَّذِينَ آمَنُوا مِنكُمْ وَعَمِلُوا الصَّالِحَاتِ لَيَسْتَخْلِفَنَّهُمْ فِي الْأَرْضِ كَمَا اسْتَخْلَفَ الَّذِينَ مِن قَبْلِهِمْ – **ವಅದಲ್ಲಾಹುಲ್ಲದೀನ ಆಮನೂ ಮಿನ್‌ಕುಮ್ ವ ಆಮಿಲು ಸ್ವಾಲಿಹಾತಿ ಲಯಸ್ತಖ್‌ಲಿಫನ್ನಹುಮ್ ಫಿಲ್ ಅರ್‌ಝಿ ಕಮಸ್ತಖ್‌ಲಿಫಲ್ಲದೀನ ಮಿನ್ ಖಬ್‌ಲಿಹಿಮ್.**

ಈ ವಾಗ್ದಾನ ಪ್ರಕಾರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಖಲೀಫರು ಹಿಂದಿನ ಸಮುದಾಯಗಳ ಖಲೀಫರ ಹಾಗೆ ಆಗುವರು. ಪವಿತ್ರ ಖುರ್‌ಆನಿನಲ್ಲಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಮೂಸಾ ಪ್ರವಾದಿಯ ಹಾಗೆಂದು ಹೇಳಲಾಗಿದೆ. ಅಲ್ಲಾಹನು ಹೀಗೆ ಹೇಳಿರುವನು: إِنَّا أَرْسَلْنَا إِلَيْكُمْ رَسُولًا شَاهِدًا عَلَيْكُمْ كَمَا أَرْسَلْنَا إِلَىٰ فِرْعَوْنَ رَسُولًا – **ಇನ್ನಾ ಅರ್‌ಸಲ್‌ನಾ ಇಲೈಕುಮ್ ರಸೂಲನ್ ಶಾಹಿದನ್ ಅಲೈಕುಮ್ ಕಮಾ ಅರ್‌ಸಲ್‌ನಾ ಇಲಾ ಫಿರ್‌ಔನ ರಸೂಲ.** ನಾವು ನಿಮಗೆ ಸಂದೇಶವಾಹಕರನ್ನು ಸಾಕ್ಷಿಯಾಗಿ ಕಳುಹಿಸಿದ್ದೇವೆ, ಫಿರ್‌ಔನನ ಕಡೆಗೆ ಸಂದೇಶವಾಹಕನನ್ನಾಗಿ ಕಳುಹಿಸಿದ ಹಾಗೆಯೇ. (73:16).

ಈ ವಚನದಲ್ಲಿ ಹೋಲಿಕೆ ರೂಪದಲ್ಲಿ **ಕಮಾ** ಶಬ್ದ ಬಳಸಿದ ಹಾಗೆ ಸೂರತುನ್ನೂರಿನ ವಚನದಲ್ಲಿ ಸಹ **ಕಮಾ** ಶಬ್ದ

ಬಳಸಲಾಗಿದೆ. ಇದರಿಂದ ತಿಳಿಯುವುದೇನೆಂದರೆ ಮೂಸವೀ ಪರಂಪರೆ ಮತ್ತು ಮುಹಮ್ಮದೀ ಪರಂಪರೆಯಲ್ಲಿ ಸಾಮ್ಯತೆಗಳು ಪರಿಪೂರ್ಣವಾಗಿವೆ ಎಂದು. ಮೂಸವೀ ಪರಂಪರೆಯ ಖಲೀಫರ ಸರಪಳಿ ಹಝ್ರತ್ ಈಸಾ ಅಲೈಹಿಸ್ಸಲಾಮರಲ್ಲಿ ಕೊನೆಗೊಂಡಿತು. ಹಝ್ರತ್ ಮೂಸಾ ಅಲೈಹಿಸ್ಸಲಾಮರ ನಂತರ ಹದಿನಾಲ್ಕನೆಯ ಶತಮಾನದಲ್ಲಿ ಹಝ್ರತ್ ಈಸಾ ಅಲೈಹಿಸ್ಸಲಾಮ್ ಆಗಮಿಸಿದರು. ಆದುದರಿಂದ ಕನಿಷ್ಠಪಕ್ಷ, ಹದಿನಾಲ್ಕನೆಯ ಶತಮಾನದಲ್ಲಿ ಒಬ್ಬ ಖಲೀಫ ಅದೇ ಶಕ್ತಿಯೊಂದಿಗೆ ಆಗಮಿಸಬೇಕಾದುದು ಅವಶ್ಯಕವಾಗಿದೆ. ಆ ಖಲೀಫ ಹಝ್ರತ್ ಮಸೀಹರೊಂದಿಗೆ ಸಾಮ್ಯತೆ ಹೊಂದಿರಬೇಕು. ಅವರ ಹೆಜ್ಜೆ ಮತ್ತು ಹೃದಯ ಹೊಂದಿರಬೇಕು.

ಈಗ ನಾನು ಕಳೆದ ವಾರ ನ್ಯೂಝಿಲೇಂಡ್‌ನಲ್ಲಿ ಸಂಭವಿಸಿದ ಘಟನೆ ಬಗ್ಗೆ ಸ್ವಲ್ಪ ಹೇಳಬಯಸುತ್ತೇನೆ. ಕಳೆದ ವಾರವೇ ಅದರ ಬಗ್ಗೆ ಹೇಳಬೇಕಾಗಿತ್ತು. ಆದರೆ ನನಗೆ ಕೊನೆಗೆ ಅದರ ಬಗ್ಗೆ ಹೇಳಲು ಮರೆತು ಹೋಯಿತು. ಅಂತೂ ನಾನು ಅದರ ಬಗ್ಗೆ ಒಂದು ಪತ್ರಿಕಾ ಹೇಳಿಕೆ ನೀಡಿರುವೆನು. ಅದರಲ್ಲಿ ಆ ಘಟನೆ ಬಗ್ಗೆ ಜಮಾಅತಿನ ಸಂತಾಪ ಪ್ರಕಟಿಸಲಾಗಿತ್ತು. ಅನೇಕ ನಿರಪರಾಧಿ ನಿಷ್ಕಳಂಕರಾದ ಜನರು ಮತ್ತು ಮಕ್ಕಳು ಜನಾಂಗೀಯ ದ್ವೇಷಕ್ಕೆ ಪಾತ್ರರಾಗಿ ಶಹೀದರಾದರು. ಅಲ್ಲಾಹನು ಅವರೆಲ್ಲರ ಮೇಲೆ ಕಾರುಣ್ಯ ಸುರಿಸಲಿ. ಅವರ ಸಂಬಧಿಕರಿಗೆ ಸಹನೆ ನೀಡಲಿ.

ಈ ಘಟನೆಯ ನಂತರ ಬೇರೆ ಕೆಲವು ವಿಷಯಗಳು ಗಮನಾರ್ಹವಾದುವು. ನ್ಯೂಝಿಲೇಂಡ್ ಸರಕಾರ ಮತ್ತು ವಿಶಿಷ್ಟವಾಗಿ ಅಲ್ಲಿನ ಪ್ರಧಾನಮಂತ್ರಿ ಮಹೋನ್ನತ ಸ್ವಭಾವ ಗುಣವನ್ನು ಪ್ರಕಟಿಸಿ ಸರಕಾರದ ಹೊಣೆಗಾರಿಕೆಯನ್ನು ಈಡೇರಿಸಿದರು. ಅದು ಅಸಾಮಾನ್ಯವೂ ಅಪ್ರತಿಮವೂ ಆಗಿತ್ತು. ಮುಸ್ಲಿಮ್ ಸರಕಾರಗಳು ಸಹ ಇದರಿಂದ ಪಾಠ ಕಲಿತು ಧಾರ್ಮಿಕ ದ್ವೇಷ ಕೊನೆಗೊಳಿಸಲು ತಮ್ಮ ಹೊಣೆಗಾರಿಕೆ ಈಡೇರಿಸುವವರಾದರೆ ಎಷ್ಟು ಚೆನ್ನಾಗಿತ್ತು. ನ್ಯೂಝಿಲೇಂಡಿನ ಜನರು ಸಹ ಪೂರ್ಣ ಸಹಕಾರ ನೀಡಿದರು. ಅಲ್ಲಾಹನು ಅವರ ಈ ಸತ್ಕರ್ಮಗಳನ್ನು ಅಂಗೀಕರಿಸಿ ಅವರಿಗೆ ಸತ್ಯವನ್ನು ಗುರುತಿಸುವ ಭಾಗ್ಯ ನೀಡಲಿ.

ಮಸ್‌ಜಿದ್‌ನಲ್ಲಿದ್ದ ಜನರ ಪೈಕಿ ಒಬ್ಬ ಮಹಿಳೆಯ ಸಂದರ್ಶನ ಟಿ.ವಿ.ಯಲ್ಲಿ ಬಿತ್ತರಿಸಲಾಗಿತ್ತು. ಆಕೆ ಅಸಾಮಾನ್ಯ ಸಹನೆ ಮತ್ತು ಧೈರ್ಯ ಪ್ರಕಟಿಸಿದರು. ಅವರ ಪತಿ ಮತ್ತು 21 ವರ್ಷ ಪ್ರಾಯದ ಪುತ್ರ ಸಹ ಹತ್ಯೆಗೊಳಿಸಲ್ಪಟ್ಟಿದ್ದರು. ಅವರು ಜನರಿಗೆ ಸಹಾಯ ಮಾಡುತ್ತಾ ಜೀವಾರ್ಪಣೆ ಮಾಡಿದರು. ಒಂದು ಉತ್ತಮ ಉದ್ದೇಶಕ್ಕೋಸ್ಕರ ಜೀವ ನೀಡಿದರು. ಅಲ್ಲಾಹನು ಅವರೊಂದಿಗೆ ಕಾರುಣ್ಯದಿಂದ ವರ್ತಿಸುವವನಾಗಲಿ.

ಈ ಘಟನೆ ಅತ್ಯಂತ ದುಃಖಕರವಾಗಿದೆ. ಅಲ್ಲಿನ ಮುಸ್ಲಿಮರು ಬಹಳ ಸಹನೆಯಿಂದಲೂ ಧೈರ್ಯದಿಂದಲೂ ವರ್ತಿಸಿದರು. ಒಬ್ಬ ಮುಸ್ಲಿಮನಿಂದ ಇದನ್ನೇ ಪ್ರತೀಕ್ಷಿಸಬೇಕಾಗಿದೆ. ಮುಸ್ಲಿಮರು ಹೀಗೆಯೇ ವರ್ತಿಸಬೇಕಾಗಿದೆ. ಆದರೆ ಕೆಲವು ಉಗ್ರವಾದಿ ಗುಂಪುಗಳು ನಾವು ಪ್ರತೀಕಾರ ಮಾಡುವೆವು ಎಂದು ಪ್ರಕಟಿಸಿದ್ದಾರೆ. ಇದು ಬಲು ದೊಡ್ಡ ತಪ್ಪಾಗಿದೆ. ಆ ರೀತಿ ಮಾಡಿದರೆ ಹಗೆತನ ವರ್ಧಿಸುವುದು. ಇಸ್ಲಾಮಿನ ಒಳಗಿರುವ ಉಗ್ರವಾದಿ ಗುಂಪುಗಳನ್ನು ಸಹ ಅಲ್ಲಾಹನು ನಾಶಮಾಡಲಿ. ಇಸ್ಲಾಮಿನ ವಾಸ್ತವಿಕ ಮತ್ತು ಸುಂದರ ತತ್ವಗಳು ಲೋಕದಲ್ಲಿ ಹರಡಲಿ. ಮುಸ್ಲಿಮರಲ್ಲಿ ಬಹುತೇಕ ಜನರು ಮಾತ್ರವಲ್ಲ ಎಲ್ಲರೂ ಈ ಕಾಲಘಟ್ಟದ ಇಮಾಮರನ್ನು ನಂಬುವ ಭಾಗ್ಯ ಅಲ್ಲಾಹನು ಅವರಿಗೆ ದಯಪಾಲಿಸಲಿ. ಅನಂತರ ಒಟ್ಟಿಗೆ ಸೇರಿ ಇಸ್ಲಾಮಿನ ವಾಸ್ತವಿಕ ಸುಂದರ ಉಪದೇಶಗಳನ್ನು ಲೋಕದಲ್ಲಿ ಹರಡುವಂತಾಗಲಿ – ಆಮೀನ್.

ನಮಾಝ್‌ಗಳ ನಂತರ ನಾನು ಕೆಲವು ನಮಾಝೆ ಜನಾಝ ಗಾಯಿಬ್ ಸಹ ನಿರ್ವಹಿಸುವೆನು. ಮೊದಲನೆಯದು ಮೌಲಾನ ಖುರ್‌ಶಿದ್ ಅಹ್ಮದ್ ಅನ್ವರ್ ಸಾಹಿಬ್ ವಕೀಲುಲ್ ಮಾಲ್ ತಹ್‌ರೀಕ್ ಜದೀದ್ ಖಾದಿಯಾನ್. ಅವರು ಮಾರ್ಚ್ ದಿನಾಂಕ 19ರಂದು 73ನೇ ವಯಸ್ಸು ಪ್ರಾಯದಲ್ಲಿ ನಿಧನ ಹೊಂದಿದರು. **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.** ಅವರು ಮೂಸೀ ಆಗಿದ್ದರು. ಬಹಳ ಕಾಲದಿಂದ ಅವರು ಕ್ಯಾನ್ಸರ್ ರೋಗಿಯಾಗಿದ್ದರು. ಬಹಳ ಸಹನೆಯಿಂದ ರೋಗವನ್ನು ಅನುಭವಿಸಿದರು. ಅವರು ರೋಗಬಾಧೆಯಲ್ಲೂ ತಮ್ಮ ಹೊಣೆಗಾರಿಕೆ ನಿರ್ವಹಿಸುವುದರಲ್ಲಿ ಕೊರತೆ ಮಾಡಿರಲಿಲ್ಲ. ಅವರು ಕೊನೆಯುಸಿರು ತನಕ ಉತ್ತಮ ರೀತಿಯಲ್ಲಿ ತಮ್ಮ ಕರ್ತವ್ಯ ನಿರ್ವಹಿಸಲು ಪ್ರಯತ್ನಿಸುತ್ತಿದ್ದರು. ತಮ್ಮ ಹೊಣೆಗಾರಿಕೆ ಉತ್ತಮವಾಗಿ ನಿರ್ವಹಿಸಿದರು. ಅವರ ಅಳಿಯ ಖಾಲಿದ್ ಅಹ್ಮದ್ ಇಲಾಹ್ ದೀನ್ ಸಾಹಿಬ್ ಬರೆಯುತ್ತಾರೆ: ರೋಗದ ಸ್ಥಿತಿಯಲ್ಲಿ ಯಾವಾಗಲಾದರೂ ವಿಶ್ರಾಂತಿ ಪಡೆಯಲು ನಾನು ಹೇಳಿದಾಗ ಅವರು ಹೇಳುತ್ತಿದ್ದರು, ಕೊನೆಯುಸಿರು ತನಕ ಸೇವೆ ಮಾಡುತ್ತಾ ಅಲ್ಲಾಹನ ಸನ್ನಿಧಿಯಲ್ಲಿ ಹಾಜರಾಗಲು ನಾನು ಇಚ್ಛಿಸುತ್ತೇನೆ. ಅವರು ಈ ಪ್ರತಿಜ್ಞೆ ಈಡೇರಿಸಿದರು. ಅವರು ಅತ್ಯಂತ ವಿಧೇಯರೂ ಶ್ರಮ ಜೀವಿಯೂ ಪ್ರಾಮಾಣಿಕರೂ ಆಗಿದ್ದರು. ಆರ್ಥಿಕ ವಿಷಯಗಳಿಗೆ ಸಂಬಂಧಿಸಿ ಆಳವಾದ ಜ್ಞಾನ ಹೊಂದಿದ್ದರು. ಅವರಿಗೆ ವಕೀಲುಲ್ ಮಾಲ್ ಹುದ್ದೆ ನೀಡಿದಾಗ ತಹ್‌ರೀಕ್ ಜದೀದ್ ಚಂದ ಕೆಲವು ಲಕ್ಷಗಳಲ್ಲಾಗಿತ್ತು. ಅಲ್ಲಾಹನ ಅನುಗ್ರಹದಿಂದ ಅದು ಕೋಟಿಗಳಿಗೆ ತಲಪಿದೆ. ಅಲ್ಲಾಹನು ಅವರ ಪದವಿಯನ್ನು ಉನ್ನತಗೊಳಿಸಲಿ. ಅವರ ಮಕ್ಕಳಿಗೆ ಸಹ ಅವರ ಒಳಿತುಗಳನ್ನು ಜಾರಿಯಲ್ಲಿರಿಸುವವರಾಗುವ ಭಾಗ್ಯ ಅಲ್ಲಾಹನು ನೀಡಲಿ.

ಎರಡನೆಯ ಜನಾಝ ತಾಹಿರ್ ಹುಸೈನ್ ಮುನ್‌ಶೀ ಸಾಹಿಬ್, ನಾಯಿಬ್ ಅಮೀರ್ ಫಿಜಿ. ಅವರು ಮಾರ್ಚ್ ದಿನಾಂಕ 5ರಂದು 72ನೇ ವಯಸ್ಸಿನಲ್ಲಿ ನಿಧನ ಹೊಂದಿದರು. **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.** ಅವರು ಫಿಜೀ ಜಮಾಅತಿಗೆ ದೀರ್ಘಕಾಲ ಸೇವೆ ಸಲ್ಲಿಸಿದವರಾಗಿದ್ದಾರೆ. ಅವರು ಬಹಳ ದೀರ್ಘಕಾಲ ನಾಯಿಬ್ ಅಮೀರ್ ಆಗಿ ಸೇವೆ ಸಲ್ಲಿಸಿದರು. ಅವರು ಉತ್ತಮ ಪ್ರಕೃತಿಯ ನಿಷ್ಠಾವಂತ ಹಿರಿಯರಾಗಿದ್ದರು. ಅವರು ಖಿಲಾಫತ್‌ನೊಂದಿಗೆ ಬಹಳ ನಿಷ್ಠೆ ಹೊಂದಿದ್ದರು. ಖಿಲಾಫತನ್ನು ಗೌರವಿಸಲು, ಅನುಸರಿಸಲು, ಅನ್ಯರಿಗೂ ಉಪದೇಶಿಸುತ್ತಿದ್ದರು ಹಾಗೂ ತನ್ನ ಶ್ರೇಷ್ಠ ಮಾದರಿ ಪ್ರಕಟಿಸುತ್ತಿದ್ದರು. ಅವರಿಗೆ ಭಿನ್ನಾಭಿಪ್ರಾಯವಿದ್ದಾಗ ಖಲೀಫರ ಅಭಿಪ್ರಾಯ ತಿಳಿದರೆ ಕೂಡಲೆ ತಮ್ಮ ಅಭಿಪ್ರಾಯ ಬದಲಾಯಿಸುತ್ತಿದ್ದರು.

ಮೂರನೆಯ ಜನಾಝ ಮೂಸಾ ಸಿಸ್‌ಕೋ ಸಾಹಿಬ್. ಅವರು ಮಾಲಿದೇಶದ ಪ್ರಜೆಯಾಗಿದ್ದಾರೆ. ಫೆಬ್ರವರಿ ದಿನಾಂಕ 15ರಂದು ನಿಧನ ಹೊಂದಿದರು. **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.** 2012 ನವೆಂಬರ್‌ನಲ್ಲಿ ಅಹ್ಮದಿಯಾದರು. 2013ರಲ್ಲಿ ವಸಾಕಾಸೂ ಪಟ್ಟಣದಲ್ಲಿ ಜಮಾಅತಿನ ರೇಡಿಯೋ ಸ್ಟೇಶನ್ ಆರಂಭವಾದಾಗ ರೇಡಿಯೋ ಸ್ಟೇಶನ್ ಡೈರಕ್ಟರ್ ಆಗಿ ಅವರನ್ನು ನೇಮಿಸಲಾಯಿತು. ಅದೇ ವರ್ಷ ಸದರ್ ಜಮಾಅತ್ ಸಹ ಆದರು. ರೇಡಿಯೋ ಸ್ಟೇಶನ್ ಸ್ಥಾಪಿಸಿದ ನಂತರ ವಸಾಕಾಸೂ ರೀಜನ್‌ನಲ್ಲಿ ಅಸಾಧಾರಣ ವಿರೋಧವನ್ನು ಎದುರಿಸಬೇಕಾಯಿತು. ಅವರು ಬಹಳ ಸಹನೆ, ಜಾಣ್ಮೆಯಿಂದ ಪರಿಸ್ಥಿತಿಯನ್ನು ಎದುರಿಸಿದರು. ಎಲ್ಲಾ ಸಮಸ್ಯೆಗಳು ಪರಿಹರಿಸಲ್ಪಟ್ಟವು. ಅವರು ಬೈಅತ್ ಮಾಡಿದ ನಂತರ ತಮ್ಮನ್ನು ಜಮಾಅತ್ ಕೆಲಸಕ್ಕೆ ವಕ್‌ಫ್ ಮಾಡಿದ್ದರು. ಅವರು ಬಾಜಮಾಅತ್ ನಮಾಝ್ ಮತ್ತು ತಹಜ್ಜುದ್ ನಮಾಝ್ ನಿರ್ವಹಿಸುತ್ತಿದ್ದರು. ಬಹಳ ನಿಷ್ಠಾವಂತರಾಗಿದ್ದರು. ಖಿಲಾಫತ್‌ನೊಂದಿಗೆ ಅಸಾಮಾನ್ಯ ಪ್ರೀತಿ ಇತ್ತು. ಖಿಲಾಫತ್ ಕರೆಗೆ ಕೂಡಲೆ ಉತ್ತರ ನೀಡುತ್ತಿದ್ದರು. ಅಲ್ಲಾಹನು ಎಲ್ಲರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಮಕ್ಕಳಿಗೆ ಸಹ ಅವರ ಒಳಿತುಗಳನ್ನು ಮೈಗೂಡಿಸಿಕೊಳ್ಳುವ ಭಾಗ್ಯ ಅಲ್ಲಾಹನು ನೀಡಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis*** *(atba)*

*At,Masjid Baithul Futhuh London, UK. On 22-03-2019.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon